
# ತೊರೆದು ಜೀವಿಸಬಹುದೇ

■ ಜಯರಾಮಾಚಾರಿ
ಕಲೆ: ಭಾವು ಪತ್ತಾರ್



ಇಡೀ ತಾಂಡಕ್ಕೆ ತಾಂಡವೇ ಮಲಗಿತ್ತು. ದೂರದಲ್ಲಿ ನಾಯಿ ಬೊಗಳುತ್ತಿರುವ ಸದ್ದು. ಬಂಡೆ ಮೇಲಿನ ಮೈಲಾರ ಗುಡಿಯ ತುದಿಯಲ್ಲಿ ದೀಪ ಹತ್ತಿ ಉರಿಯುತ್ತಿತ್ತು. ಅಪರೂಪಕ್ಕೆ ಕಾಣಿಸಿಕೊಳ್ಳುವ ಶರೀಫಜ್ಜ ತಂಬೂರಿ ಮೀಟುತ್ತ ತತ್ವಪದಗಳನ್ನು ಹಾಡುತ್ತಿದ್ದ.

ನಡುಬೀದಿಯ ಭರಮಪ್ಪ, ಭರಮನ ಹೆಂಡತಿ ಲಕ್ಕವ್ವ, ಲಕ್ಕವ್ವನ ಹಿರಿ ಮಗಳು ಸಾಕಮ್ಮ ಮಾತ್ರ ಕಣ್ಣಿನ ಎವೆ ಮುಚ್ಚದೇ ಹಾಗೆ ಮಲಗಿದ್ದರು. ಬೇಸಗೆಯ ರಾತ್ರಿಗೆ ಬೀಸುವ ಗಾಳಿ ಕೂಡ ಬಿಸಿಯಿತ್ತು. ಭರಮ ಒಳಗಡೆ ನಿದ್ದೆ ಬರದೇ ಚಾಪೆ ದಿಂಬು ಎತ್ತಿಕೊಂಡು ಹೊರಗೆ ಬಂದು ಮಲಗಿದ್ದ. ತಾಂಡಾದ ಸುತ್ತಲೂ ಗುಡ್ಡಗಳು. ಪೂರ್ವಕ್ಕೆ ಹನುಮನಗುಡ್ಡ, ಗುಡ್ಡದ ಮೇಲೆ ಹನುಮನ ದೊಡ್ಡ ಪಾದ, ಸೀತೆಯನ್ನು ಹುಡುಕಿ ಕರೆತರಲು ಹೊರಟ ಹನುಮ ಈ ಗುಡ್ಡದಿಂದಲೇ ಜಿಗಿದಿದ್ದನಂತೆ. ಪಶ್ಚಿಮಕ್ಕೆ ಕನಕ ಗುಡ್ಡ, ಗುಡ್ಡದ ಮೇಲೆ ಮೈಲಾರ ಗುಡಿ, ಮತ್ತೊಂದು ಕಡೆ ಸಂತ ಸೇವಾಲಾಲ್ ದೇವಸ್ಥಾನ.

'ಸಾಕಮ್ಮ ಹೊಸಪೇಟೆಯಲ್ಲಿ ಜನಿವಾರದವನ್ ಜೊತೆ ಓಡಾಡಕ್ಕಾತಿದ್ಲಲೋ ಭರಮ' ಎಂದು ಯಾವಾಗ ಕಿವಿಗೆ ಬಿತ್ತೋ ಅವತ್ತಿನಿಂದ ಭರಮನಿಗೆ ನಿದ್ದೆ ಹತ್ತಿದ್ದಿಲ್ಲ. ಐವತ್ತು ದಾಟಿದ ಅವನ ಮುಖದಲ್ಲಿ ಮುಪ್ಪಿನ ಗೆರೆಗಳು ಹೊಂಚು ಹಾಕಿ ಕೂತು ಕೆಲವು ವರ್ಷಗಳಾಗಿವೆ. ಅದು ಇದು ಸಣ್ಣ ಪುಟ್ಟ ಕೆಲಸ ಮಾಡಿಕೊಂಡು ಒಂದಿಷ್ಟು ದುಡಿಯುತ್ತಿದ್ದ ಭರಮ ತನ್ನ ಮಗಳು ಜಾತಿ ಕೆಡಿಸುವ, ತಾಂಡಾದಲ್ಲಿ ತನ್ನ ಮರ್ಯಾದೆ ತೆಗೆಯುವ ಕೆಲಸ ಮಾಡ್ತಾ ಇದ್ದಾಳೆ ಎಂದು ತಿಳಿದ ಮೇಲೆ ಸದಾ ಚಡಪಡಿಕೆಯಲ್ಲಿರ್ತಿದ್ದ.